INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 11 | ISSUE - 7 | AUGUST - 2021

# ಗರುಡಾದ್ರಿ ಕಲ

ಶ್ರೀಮತಿ ಶುಭಾ
(ಸಹಾಯಕ ಪ್ರಾಧ್ಯಾಪಕಿ), ಇತಿಹಾಸ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ



ಭಾರತೀಯ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಮುಘಲ್, ರಾಜಸ್ತಾನಿ, ಪಹಾಡಿ ಚಿತ್ರಕಲೆಯೊಂದಿಗೆ ವಿಜಯನಗರ, ಬಿಜಾಪೂರ, ಹೈದರಾಬಾದ, ತಂಜಾವೂರು, ಮೈಸೂರು ಮುಂತಾದ ಪ್ರಾದೇಶಿಕ ಕಲೆಗಳನ್ನು ಗುರುತಿಸಲಾಗುತ್ತದೆ. ಇಂಥದೇ ಪ್ರಾದೇಶಿಕ ಕಲೆಗಳಲ್ಲಿ ಸುರಪುರ ಚಿತ್ರಕಲೆಯು ಒಂದು. ಈ ಕಲೆ ತನ್ನ ವಿಶಿಷ್ಟ ರಚನೆ, ತಂತ್ರಗಾರಿಕೆ ಹಾಗೂ ಪ್ರಾದೇಶಿಕ ವೈಶಿಷ್ಟ್ಯತೆಗಳಿಂದಾಗಿ 'ಸ್ವತಂತ್ರ ಶೈಲಿ'ಯನ್ನು ಕಂಡುಕೊಂಡಿತು. ಸುರಪುರ ಸಂಸ್ಥಾನದ ಅರಸರ ಆಶ್ರಯದಲ್ಲಿ ಸಂಸ್ಥಾನದ ಹೆಸರಿನೊಂದಿಗೆ ಬೆಳೆದು ಬಂದ ಸುರಪುರ ಚಿತ್ರಕಲೆ ಇಂದು ವಿಶ್ವದ ಗಮನ ಸೆಳೆಯುತ್ತಿದೆ. ಈ ಚಿತ್ರಕಲೆ ವಿವಿಧ ಕಾಲಘಟ್ಟಗಳಲ್ಲಿ ಬೆಳವಣಿಗೆಯನ್ನು ಹೊಂದುತ್ತಾ ಬಂದುದಲ್ಲದೇ ಪ್ರದೇಶ ನಿಷ್ಠ & ಜನಾಂಗನಿಷ್ಠ ವೈಶಿಷ್ಟ್ಯಗಳೊಂದಿಗೆ ರಾಜಾಶ್ರಯ ಹಾಗೂ ವಿವಿಧ ಧರ್ಮಗಳ ಧಾರ್ಮಿಕ ಹಿನ್ನಲೆಯಲ್ಲಿ ಕಾಣಿಸಿಕೊಂಡಿದೆ.

ಸುರಪುರ ಚಿತ್ರಕಲೆಯಾದ ಗರುಡಾದ್ರಿ ಚಿತ್ರಕಲೆ ಕುರಿತಂತೆ ಅನೇಕ ಅಧ್ಯಯನಗಳು ನಡೆದಿವೆ. ಪ್ರಸ್ತುತ ಲೇಖನದಲ್ಲಿ ಈ ಚಿತ್ರಕಲೆ ಕುರಿತಂತೆ ಬಂದಿರುವ ಕೃತಿಗಳನ್ನು ಚರ್ಚಿಸಲಾಗಿದೆ. ಎ. ಕೃಷ್ಣ ಅವರ 'ಸಗರನಾಡು ದರ್ಶನ', ಲೋಕಯ್ಯ ಮಠಪತಿ ಅವರ 'ಗರುಡಾದ್ರಿ ಚಿಕಣಿ ಚಿತ್ರಕಲೆ', ಬಸವರಾಜ ಉಪ್ಪಿನ ಅವರ 'ಬಾನಯ್ಯ ಗರುಡಾದ್ರಿ',ಡಾ॥ ಎಸ್.ಕೆ ಅರುಣಿ ಅವರ 'ದಖನಿ ಚಿತ್ರಕಲೆ', ಭಾಸ್ಕರರಾವ ಮೂಡಬೂಳ ಅವರ 'ಮರೆತು ಹೋದ ಸುರಪುರ ಇತಿಹಾಸ',ಬಿ. ಕೃಷ್ಣಮಾಚಾರ್ ಅವರ 'ಮರೆಯಲಾಗದ ಸುರಪುರ ರಾಜರ ಚರಿತ್ರೆ',ಡಾ॥ ರಂಗರಾಜ ವನದುರ್ಗ ಅವರ 'ಸುರಪುರ ಸಂಸ್ಥಾನ: ಒಂದು ಅಧ್ಯಯನ' (ಪಿ.ಹೆಚ್.ಡಿ ಪ್ರಬಂಧ) ಈ ಮೇಲಿನ ಕೃತಿಗಳಲ್ಲಿ ಸುರಪುರ ಚಿತ್ರಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದಂತೆ ಮತ್ತು ಅನ್ಯಕಲಾ ಶೈಲಿಗಳ ಕುರಿತಂತೆ ಚರ್ಚಿಸಿರುವದನ್ನು ನೋಡಬಹುದು.ಈ ಚಿತ್ರಕಲೆಯ ಚಿತ್ರಗಳು ಭಾರತದಲ್ಲಿನ ಪ್ರಮುಖ ವಸ್ತು ಸಂಗ್ರಹಾಲಯಗಳಲ್ಲಿ, ಕಲ್ಕತ್ತಾದ ಪ್ರಾಚ್ಯ ವಸ್ತುಸಂಗ್ರಹಾಲಯ, ಮುಂಬೈನ ಶ್ರೀ ಛತ್ರಪತಿ ಶಿವಾಜಿ ಮಹಾರಾಜ್ ವಸ್ತುಸಂಗ್ರಹಾಲಯ,ಹೈದರಾಬಾದಿನ ಸಾಲಾರ್ ಜಂಗ್ ವಸ್ತುಸಂಗ್ರಹಾಲಯ, ವಾರಣಾಸಿಯ ಕನ್ನಡ ಅಧ್ಯಯನ ವಿಭಾಗ, ಪುಣೆಯ ಭಾರತೀಯ ಇತಿಹಾಸ ಸಂಶೋಧಕ ಮಂಡಳಿ,ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ,ಮುಂತಾದ ಸ್ಥಳಗಳಲ್ಲಿ ದೊರಕುತ್ತವೆ.

**ಉದ್ದೇಶಗಳು:**

1. ಗರುಡಾದ್ರಿ ಚಿತ್ರಕಲೆಯನ್ನು ಪರಿಚಯಸುವುದು.
2. ಗರುಡಾದ್ರಿ ಚಿತ್ರಕಲೆಯ ವಿಧಿ ವಿಧಾನಗಳ ಬಗ್ಗೆ ತಿಳಿಸುವುದು.
3. ಪ್ರಸ್ತುತ ಗರುಡಾದ್ರಿ ಚಿತ್ರಕಲೆ ಮತ್ತು ಕಲಾವಿದರ ಸ್ಥಿತಿ ಗತಿಯ ಕುರಿತು ಚರ್ಚಿಸುವುದು.

ವಿಜಯನಗರ ಸಾಮ್ರಾಜ್ಯದ ಪತನಾನಂತರ ದಕ್ಷಿಣ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಸಂಸ್ಥಾನಗಳಲ್ಲಿ ಸುರಪುರ ಸಂಸ್ಥಾನವು ಒಂದು, ಇವರು ಕೃಷ್ಣಾ–ಭೀಮಾ ನದಿಗಳ ನಡುವಿನ ಸಗರನಾಡು ಪ್ರದೇಶದಲ್ಲಿ ಸುಮಾರು 2 ಶತಮಾನಗಳಿಗೂ ಅಧಿಕಕಾಲ ಕ್ರಿ.ಶ 1636–1848ರ ವರೆಗೆ ಆಳ್ವಿಕೆ ನಡೆಸಿದ್ದಾರೆ. ಇಂದಿನ ಯಾದಗಿರಿ ಜಿಲ್ಲೆಯ ತಾಲೂಕು ಕೇಂದ್ರವಾದ ಸುರಪುರವು ಗೋಸಲ ವಂಶದ ಅರಸರ ಆಳ್ವಿಕೆಗೊಳಪಟ್ಟ ಪ್ರದೇಶವಾಗಿತ್ತು. ಸುರಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುರಪುರ ಸಂಸ್ಥಾನದ ಅರಸರು

ಕ್ರಿ.ಶ 1636–1848 ರವರೆಗೆ ಆಳ್ವಿಕೆ ಮಾಡಿದರು. ಮೂಲತಃ ಇವರು ಆಂಧ್ರ ಪ್ರದೇಶದ ರತ್ನಗಿರಿ ಮೂಲದವರು. ಆರಂಭದಲ್ಲಿ ವಾಗೀನಗೇರಿಯಲ್ಲಿ ಸಂಸ್ಥಾನವನ್ನು ಸ್ಥಾಪಿಸಿ ನಂತರ ಸುರಪುರಕ್ಕೆ ತಮ್ಮ ರಾಜಧಾನಿಯನ್ನು ವರ್ಗಾಯಿಸಿ ಆಳ್ವಿಕೆ ಮಾಡಿದ್ದಾರೆ.

ಸುರಪುರ ಸಂಸ್ಥಾನದ ಇತಿಹಾಸ ಗಡ್ಡಿ ಪಿಡ್ಡ ನಾಯಕನಿಂದ ಆರಂಭವಾಗುತ್ತದೆ ಕ್ರಿ.ಶ 1636ರಲ್ಲಿ ವಾಗೀನಗೇರಿಯಲ್ಲಿ ಸುರಪುರ ಸಂಸ್ಥಾನ ಅಸ್ತಿತ್ವಕ್ಕೆ ಬಂದಿತೆಂದು ಹೇಳಬಹುದು. ಸುಮಾರು 11 ಜನ ಅರಸರು ಸುರಪುರ ಸಂಸ್ಥಾನವನ್ನು ಆಳ್ವಿಕೆ ಮಾಡಿದ್ದಾರೆ. ಪೀತಾಂಬರಿ ಬಹರಿ ಪಿಡ್ಡನಾಯಕನ ಆಳ್ವಿಕೆ ಕಾಲಾವಧಿಯಲ್ಲಿ ಸುರಪುರನಗರ ನಿರ್ಮಾಣವಾಯಿತು. ಇವರ ಕಾಲದಲ್ಲಿಯೇ ರಾಜಧಾನಿ ಬದಲಾವಣೆಯಾಯಿತು. (1687–1726) ಮುಂದೆ ಬಂದ ಅರಸರು ಕೂಡ ಸುರಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು 1848ರವರೆಗೆ ಆಳ್ವಿಕೆ ಮಾಡಿದರು. ಸುರಪುರ ಸಂಸ್ಥಾನ ರೂಪಗೊಂಡ ನಂತರ ರಾಜಾ ರಾಘವ ಪಾಮನಾಯಕ ಅವರಿಂದ ಮೊದಲ್ಗೊಂಡು ಕೊನೆಯ ರಾಜಾ ನಾಲ್ವಡಿ ವೆಂಕಟಪ್ಪ ನಾಯಕರವರೆಗಿನ ಅವಧಿಯನ್ನು ಸುರಪುರ ಸಂಸ್ಥಾನದ ಸುವರ್ಣಯುಗವೆಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ಸಾಹಿತ್ಯ, ಸಂಗೀತ, ಚಿತ್ರಕಲೆಗಳಿಂದ ಸುರಪುರ ಸಂಸ್ಥಾನವು ಮಹತ್ವಪೂರ್ಣ ಕೇಂದ್ರವೆನಿಸಿಕೊಂಡಿತು ಸುರಪುರ ಸಂಸ್ಥಾನದ ಚರಿತ್ರೆಯನ್ನು ನೋಡಿದಾಗ ಇಲ್ಲಿನ ಅರಸರು ಪ್ರಜಾ ಹಿತೈಷಿಗಳಾಗಿದ್ದರಲ್ಲದೇ ಸಾಹಿತ್ಯ, ಸಂಗೀತ, ಚಿತ್ರಕಲೆಗೆ ಆಶ್ರಯ ನೀಡುವ ಮೂಲಕ ಕಲಾಪೋಷಕರೆಂದೆನಿಸಿಕೊಂಡಿದ್ದಾರೆ.

ಸುರಪುರ ಸಂಸ್ಥಾನದ ರಾಜಾಶ್ರಯ ಪಡೆದ ಪಂಡಿತರು, ಕಲಾವಿದರು ಸಂಸ್ಥಾನದ ಕೀರ್ತಿಯನ್ನು ನಾಡಿನುದಕ್ಕೂ ಪಸರಿಸಿದ್ದಾರೆ. ಬುಕ್ಕಪಟ್ಟಣಂ ದೀಕ್ಷಿತರೆಂಬ ಮಹಾ ಪಂಡಿತರು ಸುರಪುರಕ್ಕೆ ಬಂದು ನೆಲಸಿದರು. ಶ್ರೀ ಮತ್ತಿರುಮಲ ಬುಕ್ಕಪಟ್ಟಣದ ಶ್ರೀನಿವಾಸ ಮಹಾದೇಶಿಕರೆಂಬ ಪಂಡಿತರು ಸುರಪುರ ಸಂಸ್ಥಾನದಲ್ಲಿ ಆಶ್ರಯ ಪಡೆದಿದ್ದರು. ಇವರಲ್ಲದೇ ಹೆಬ್ಬಾಳದ ಜ್ಯೋತಿರ್ವಿದ್ವಾಂಸರು, ಯಾಳಗಿ ಸೋಮಭಟ್ಟರ ಪೂರ್ವಿಕರೂ, ರಾಮದಾಸ ಕೃಷ್ಣದಾಸ, ಹಯಗ್ರೀವಾಚಾರ ಪಂಡಿತರು ಸುರಪುರ ಸಂಸ್ಥಾನದ ಆಸ್ಥಾನದಲ್ಲಿದ್ದರು. ಗಾಯನ ಕಲೆಯಲ್ಲಿ ಸುಪ್ರಸಿದ್ಧರಾದ 'ಕಂಠೆ ವೀಣ' ಮನೆತನದವರು ಆಗಿನ ಕಾಲದ ಶ್ರೇಷ್ಠ ಗಾಯಕರು. 'ಕಮಲೇಶ ವಿಠಲ' ರೆಂಬ ಅಂಕಿತದಿಂದ ಪ್ರಸಿದ್ಧವಾದ ಗೀತೆಗಳನ್ನು ರಚಿಸಿದ ಆನಂದದಾಸರು ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದವರು. ಚಿತ್ರಕಲೆಯಲ್ಲಿಯೂ ಈ ಸಂಸ್ಥಾನದ ಪಾತ್ರ ಕಡಿಮೆಯೇನಿಲ್ಲ. ಸಂಸ್ಥಾನದಲ್ಲಿ ಆಶ್ರಯ ಹೊಂದಿದ ಗರುಡಾದ್ರಿ ಮನೆತನ ಚಿತ್ರಕಲೆಯಲ್ಲಿ ವಿಶ್ವದ ಗಮನ ಸೆಳೆದಿದೆ. ಹೀಗೆ ಸಾಹಿತ್ರ, ಸಂಗೀತ ಮತ್ತು ಚಿತ್ರಕಲೆಗಳಿಂದ ಸುರಪುರ ಸಂಸ್ಥಾನ ದಕ್ಷಿಣ ಭಾರತದಲ್ಲೆ ಬಹು ಕೀರ್ತಿಯನ್ನು ಪಡೆದಿತ್ತು.

**ಗರುಡಾದ್ರಿ ಮನೆತನ:–** ಸುರಪುರ ಸಂಸ್ಥಾನದ ರಾಜಾಶ್ರಯ ಪಡೆದ ಚಿತ್ರಕಲಾವಿದರಲ್ಲಿ 'ಗರುಡಾದ್ರಿ' ಮನೆತನ ಪ್ರಮುಖವಾದುದು.ಚಿಟವೆಲಯ್ಯ ಈ ಮನೆತನದ ಮೂಲ ಪುರುಷ. ಕ್ರಿ.ಶ 1752 ರಿಂದ 1858ರ ವರೆಗಿನ ಅವಧಿಯನ್ನು ಸುರಪುರದ ಸುವರ್ಣ ಯುಗವೆಂದು ಹೇಳಲಾಗಿದೆ. ಈ ಅವಧಿಯಲ್ಲಿಯೇ ಗರುಡಾದ್ರಿ ಮನೆತನದವರು ಸುರಪುರಕ್ಕೆ ಆಗಮಿಸಿದ್ದರು. ಆಂಧ್ರ ಮೂಲದ ಗರುಡಾದ್ರಿ ಮನೆತನದವರು ಆಸ್ಥಾನ ಕಲಾವಿದರಾಗಿರುವುದರ ಜೊತೆಗೆ ಸುರಪುರದ ಶ್ರೀ ವೇಣು ಗೋಪಾಲ ಸ್ವಾಮಿ ದೇವಾಲಯದ ಅರ್ಚಕರು ಆಗಿದ್ದರು.

ಗರುಡಾದ್ರಿ ಮನೆತನದ ಪೂರ್ವಜರು ವಿಜಯನಗರ ಆಶ್ರಯದಲ್ಲಿದ್ದರೆಂದು ಹೇಳಲಾಗಿದೆ. ವಿಜಯನಗರ ಪತನಾನಂತರ ಅಲ್ಲಿನ ಅನೇಕ ಕಲಾವಿದರು ನಾಡಿನ ಬೇರೆ ಬೇರೆ ಕಡೆಗಳಲ್ಲಿ ಚದುರಿ ಹೋದರೆಂದು, ಹೀಗೆ ಚದುರಿಹೋದ ಅವರಲ್ಲಿ ಒಂದು ಕುಟುಂಬ ಸುರಪುರಕ್ಕೆ ಬಂದ ನೆಲೆಸಿದರೆಂದು ಹೇಳಲಾಗುತ್ತದೆ ಅವರೇ ಗರುಡಾದ್ರಿ ಮನೆತನದವರು.

**ಗುರಡಾದ್ರಿ ಹೆಸರಿನ ಹಿನ್ನಲೆ:–**ಸುರಪುರ ಸಂಸ್ಥಾನದಲ್ಲಿ ಆಶ್ರಯ ಪಡೆಯುವ ಪೂರ್ವದಲ್ಲಿ ಗರುಡಾದ್ರಿಯವರು 'ವರ್ಮಾ' ಎಂದೇ ಪ್ರಸಿದ್ಧರಾಗಿದ್ದರು. ಈ ಮಾತಿಗೆ ಪೂರಕವೆನ್ನುವಂತೆ ಮೊದಲ ಬಾನಯ್ಯನ ಮಗ ಕಮಲಯ್ಯ ಚಿತ್ರಿಸಿದ ಚಿತ್ರಗಳ ಕೆಳಗೆ 'ಜಹಗೀರದಾರ ಕಮಲ್ ವರ್ಮಾ' ಎಂದು ಬರೆದಿರುವುದು ತಿಳಿದುಬರುತ್ತದೆ. ಚಿಟವೇಲಯ್ಯನ ಮಗ ಬೆನಕಯ್ಯ ನಿಂದ ಈ ಮನೆತದವರಿಗೆ 'ಗರುಡಾದ್ರಿ' ಎಂಬ ಹೆಸರಿನಿಂದ ಕರೆಯಲಾಯಿತು. ಈ ಹೆಸರಿನಿಂದಲೇ ಗರುಡಾದ್ರಿ ಮನೆತನ ಇಂದು ವಿಶ್ವ ಪ್ರಸಿದ್ಧಿಯನ್ನು ಪಡೆದಿದೆ.

ಚಿಟವೇಲಯ್ಯನು ಸುರಪುರ ಸಂಸ್ಥಾನದ ರಾಜಶ್ರಯವನ್ನು ಪಡೆದ ಕಾರಣ ಇತನ ಮೊದಲ ಮಗ ಬೆನಕಯ್ಯನು ತನ್ನ ತಂದೆಯೊಂದಿಗೆ ಸುರಪುರ ಸಂಸ್ಥಾನದಲ್ಲಿ ಆಶ್ರಯವನ್ನು ಪಡೆದನು. ಬೆನಕಯ್ಯ ಇತನು ಚಿತ್ರಕಲಾವಿದನಾಗಿದ್ದನಲ್ಲದೆ ಮೂರ್ತಿ ಶಿಲ್ಪ ರಚನೆಯಲ್ಲೂ ಪ್ರಾವಿಣ್ಯತೆಯನ್ನು ಹೊಂದಿದ್ದನು. ಇಂದು ಸುರಪುರ ಮತ್ತು ಇತರ ಕಡೆ ಕಂಡುಬರುವ ಸುಮಾರು 200–250 ವರ್ಷಗಳ ಹಳೆಯ ಚಿತ್ರಗಳು ಇವನ ಮತ್ತು ಇವನ ಮಗ ಮೊದಲ ಬಾನಯ್ಯನ ಕಾಲದಲ್ಲಿ ರಚನೆಗೊಂಡಿದೆ.

ಮೊದಲ ಬಾನಯ್ಯನು ಸುರಪುರ ಸಂಸ್ಥಾನದ ಆಸ್ಥಾನ ಕಲಾವಿದರಲ್ಲಿಯೇ ಶ್ರೇಷ್ಟನಾಗಿದ್ದನು. ಇವನ ಕಾಲದ ಚಿತ್ರಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣಬಹುದು. ಈ ಅವಧಿಯ ಚಿತ್ರಗಳು ಪ್ರತ್ಯೇಕವಾಗಿ 'ಸುರಪುರ ಶೈಲಿಯ' ಚಿತ್ರಗಳೆನ್ನುವಷ್ಟು ಪ್ರಾದೇಶಿಕ ವೈಶಿಷ್ಟ್ಯತೆಗಳಿಂದ ವಿಶಿಷ್ಟ್ಯ ತಂತ್ರಗಾರಿಕೆಯಿಂದ ಕೂಡಿದೆ. ಇತನ ಮಗನಾದ ಕಮಲಯ್ಯನು ಶ್ರೇಷ್ಠ ಚಿತ್ರಕಲಾವಿದನಾಗಿದ್ದನು. ಇವನ ಕಾಲದಲ್ಲಿ ಸಾಕಷ್ಟು ಚಿತ್ರಗಳು ರಚನೆಗೊಂಡಿದೆ. ಕಮಲಯ್ಯನ ಏಕಮಾತ್ರ ಪುತ್ರನೇ 2ನೇ ಬಾನಯ್ಯ. ಇವನು ಅಪ್ರತಿಮ ಕಲಾವಿದನಾಗಿದ್ದನು. ಇತನು 1947ರಲ್ಲಿ ಹೈದರಾಬಾದಿನ ಅಂದಿನ ನವಾಬರಾಗಿದ್ದ ನವಾಬ್ ಆಶ್ರಫ್ ಅಲೀಖಾನರವರು ಕಲಾ ಕೇಂದ್ರವೊಂದನ್ನು ಆರಂಭಿಸುತ್ತಾರೆ. ಈ ಕೇಂದ್ರದಲ್ಲಿ ಕಲಾವಿದನಾಗಿ ಸೇವೆ ಸಲ್ಲಿಸುವ ಅವಕಾಶ ಬಾನಯ್ಯನಿಗೆ ಒದಗಿ ಬಂದಿತು. ನವಾಬರ ಕುಟುಂಬಕ್ಕೆ ಸಂಬಂಧಿಸಿದ ಚಿತ್ರಗಳು ನಿಸರ್ಗ ಚಿತ್ರಗಳು, ದೇವಾನು–ದೇವತೆಗಳ

ಚಿತ್ರಗಳನ್ನು ರಚಿಸಿದ್ದಾರೆ. ಇದೇ ಅವಧಿಯಲ್ಲಿ ಹೈದರಾಬಾದ ಸಂಸ್ಥಾನದ ದೊರೆ ಮೀರ ಉಸ್ಮಾನ ಅಲೀಖಾನ ಬಹಾದ್ದೂರ ಅವರ ಉರ್ದು ಕವಿತೆಯನ್ನು ಬರೆದಿದ್ದಾರೆ.

ಸುರಪುರ ಸಾಂಪ್ರದಾಯಿಕ ಚಿತ್ರಗಳಲ್ಲಿ ಕಂಡುಬರುವ ಛಾಯಾಚಿತ್ರ ಬಳಕೆಯ ತಂತ್ರಗಾರಿಕೆ 2ನೇ ಬಾನಯ್ಯನ ಚಿತ್ರಗಳಲ್ಲಿಯೂ ಕಾಣಬಹುದು. 1950ರಲ್ಲಿ ಬಾನಯ್ಯನಿಗೆ ಹೈದರಾಬಾದ ಸರ್ಕಾರ ಹಾಗೂ ಖಾಸಗಿ ಸಂಘ ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳು ಲಭಿಸಿವೆ. ಬಾನಯ್ಯ ದೆಹಲಯ ರಾಷ್ಟ್ರಪತಿ ಭವನದಲ್ಲಿ ಚಿತ್ರಗಳನ್ನು ಬಿಡಿಸುವ ಅವಕಾಶ ಲಭಿಸಿತು. 1954ರಲ್ಲಿ ರಾಷ್ಟ್ರಪತಿ ಭವನದ ಗೋಡೆಗಳ ಮತ್ತು ಅಲ್ಲಿನ ಪೀಠೋಪಕರಣಗಳ ಮೇಲೆ ವಿವಿಧ ಬಗೆಯ ಚಿತ್ರಗಳನ್ನು ಬಿಡಿಸಿದನು ಈ ಮಹತ್ಕಾರ್ಯಕ್ಕಾಗಿ ರಾಷ್ಟ್ರಪತಿ ಸನ್ಮಾನಿಸಿ ಗೌರವಿಸಿದರು.

ಹೀಗೆ ಗರುಡಾದ್ರಿ ಮನೆತನದ ಮೂಲ ಪುರುಷ ಚಿಟವೇಲಯ್ಯನಿಂದ ಪ್ರಾರಂಭಗೊಂಡು ಕೊನೆಯ ಚೈತನ್ಯವರೆಗಿನ ಅನೇಕರಲ್ಲಿ ಮೊದಲ ಬೆನಕಯ್ಯ, ಮೊದಲ ಬಾನಯ್ಯ ಹಾಗೂ ಎರಡನೇ ಬಾನಯ್ಯನರನ್ನು ಹೊರತು ಪಡೆಸಿ ಮುಂದೆ ಬಂದ ಈ ಮನೆತನದವರೆಲ್ಲರು ವಿವಿಧ ಕ್ಷೇತ್ರಗಳನ್ನರಿಸಿ ಹೋದುದರಿಂದ ಪ್ರಸಿದ್ಧ ಸುರಪುರ ಸಾಂಪ್ರದಾಯಿಕ ಚಿತ್ರ ರಚನೆಯು ಎರಡನೇ ಬಾನಯ್ಯನೊಂದಿಗೆ ಸ್ಥಗಿತಗೊಂಡಿರುದನ್ನು ಕಾಣಬಹುದಾಗಿದೆ.

ಸುರಪುರವು ಒಂದು ಕಲಾಕೇಂದ್ರವಾಗಿರಲು ಮುಖ್ಯ ಕಾರಣಿಕರ್ತರಾದವರು ಬ್ರಿಟಿಷರ ರಾಜಕೀಯ ಪ್ರತಿನಿಧಿಯಾಗಿ ಸುರಪುರ ಸಂಸ್ಥಾನದಲ್ಲಿದ್ದ ಮೇಡೋಸ್ ಟೇಲರ್. ಇವನು ಚಿತ್ರಕಲಾವಿದನು ಆಗಿದ್ದನಲ್ಲದೇ ಸುರಪುರ ಚಿತ್ರಕಲೆಯನ್ನು ಅಂತರಾಷ್ಟ್ರೀಯ ನೆಲೆಯಲ್ಲಿ ಪರಿಚಯಿಸಿದನು. ಸುರಪುರ ಆಸ್ಥಾನ ಕಲಾವಿದರಲ್ಲಿಯೇ ಶ್ರೇಷ್ಠನಾದ ಗರುಡಾದ್ರಿ ಮೊದಲ ಬಾನಯ್ಯನು ಸಾಂಪ್ರದಾಯಿಕ ಚಿತ್ರಗಳಲ್ಲಿ ಛಾಯಾಚಿತ್ರವನ್ನು ಬಳಸಿ ಚಿತ್ರ ರಚಿಸುವ ನವೀನ ತಂತ್ರಗಾರಿಕೆಯನ್ನು ಕಲಾ ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಸುರಪುರ ಆಸ್ಥಾನ ಕಲಾವಿದರಿಗೆ ಸಲ್ಲುತ್ತದೆ. ಟೇಲರನು ಚಿತ್ರಿಸಿದ ಚಿತ್ರಗಳಲ್ಲಿ ಬಹುಪಾಲು ದಖನ್ ಪ್ರದೇಶದ ಸ್ಮಾರಕಗಳ ಕುರಿತಾಗಿವೆ.

**ಚಿತ್ರರಚನಾ ವಿಧಾನ:** ಆಸ್ಥಾನ ಕಲಾವಿದರಾದ ಗರುಡಾದ್ರಿ ಮನೆತನದವರಿಂದ ಚಿತ್ರಿಸಲ್ಪಟ್ಟ ಚಿತ್ರಗಳು ಹಲವು ಮಾಧ್ಯಮಗಳಲ್ಲಿವೆ.ಹಾಳೆಯ ಮೇಲೆ ಬರೆದ ಚಿತ್ರಗಳು,ಕಿರು ರೂಪ ಮಾದರಿ, ದೊಡ್ಡ ಗಾತ್ರದ ಚಿತ್ರಗಳು ಈ ಕಲೆಯಲ್ಲಿ ಕಂಡುಬರುತ್ತವೆ. ಬೆನಕಯ್ಯ ಮತ್ತು ಬಾನಯ್ಯನವರು ಚಿತ್ರ ಮತ್ತು ಶಿಲ್ಪಶಾಸ್ತ್ರ ಬಲ್ಲವರಾಗಿದ್ದರಿಂದ,ದೇವಾನುದೇವತೆಗಳ, ಋಷಿಮುನಿಗಳ ಮತ್ತು ಮಾನವರ ಚಿತ್ರಗಳನ್ನು ಶಾಸ್ತ್ರಗಳ ಪದ್ಧತಿಯಂತೆ ರಚಿಸಿದ್ದಾರೆ. ಚಿತ್ರಗಳಲ್ಲಿನ ರೇಖಾವಿನ್ಯಾಸ, ಆಕೃತಿಗಳ ಸಂಯೋಜನೆ, ಬಂಗಾರ ವರ್ಣದ ಬಳಕೆಯನ್ನು ಗಮನಿಸಿದಾಗ ಗರುಡಾದ್ರಿ ಮನೆತನದವರು ಚಿತ್ರಿಸಿದ ಚಿತ್ರಗಳನ್ನು ಸುಲಭವಾಗಿ ಬೇರ್ಪಡಿಸಬಹುದು. ಗಾಜಿನ ತೂಗುದೀಪಗಳು ಮತ್ತು ಮುನ್ನೆಲೆಯಲ್ಲಿ ಬಂಗಾರದ ತಟ್ಟೆಗಳು, ಹೂಜಿಗಳು ಇತರ ಐಹಿಕ ವಸ್ತುಗಳನ್ನು ಬಳಸಿರುವುದು ಸುರಪುರ ಚಿತ್ರಗಳಲ್ಲಿ ಕಂಡುಬರುವ ಪ್ರಮುಖ ಆಕರ್ಷಣೆ.

**ಚಿತ್ರಗಳ ವರ್ಗೀಕರಣ:** ಗರುಡಾದ್ರಿ ಮನೆತನದವರಿಂದ ಚಿತ್ರಿಸಲ್ಪಟ್ಟ ಚಿತ್ರಗಳು'ಸುರಪುರ ಶೈಲಿಯ' ಚಿತ್ರಗಳೆಂದು ಪ್ರಸಿದ್ಧಿ ಪಡೆದಿವೆ. ಈ ಚಿತ್ರಗಳನ್ನು ಭಿತ್ತಿಚಿತ್ರಗಳು, ಹಸ್ತಪ್ರತಿ ಚಿತ್ರಗಳು, ಸಂಕಿರಣ ಮಾಧ್ಯಮದ ಚಿತ್ರಗಳೆಂದು ವರ್ಗೀಕರಿಸಲಾಗಿದೆ.

1. **ಭಿತ್ತಿ ಚಿತ್ರಕಲೆ:** ಭಿತ್ತಿ ಚಿತ್ರಕಲೆ ಎಂದರೆ ಗೋಡೆ, ಮೇಲ್ಛಾವಣಿ ಅಥವಾ ಕಟ್ಟಡದ ಯಾವುದೇ ಭಾಗವನ್ನು ವರ್ಣ ಚಿತ್ರದಿಂದ ಮತ್ತು ಉಬ್ಬು ಇಲ್ಲವೇ ತಗ್ಗು ಚಿತ್ರಗಳಿಂದ ಅಲಂಕರಿಸುವ ವಿಧಾನ. ಈ ಭಿತ್ತಿ ಚಿತ್ರಗಳನ್ನು ಸುರಪುರ ಅರಮನೆಗಳಲ್ಲಿ, ರುದ್ರಸ್ವಾಮಿ ಮಠ, ಅಣ್ಣಯ್ಯ ಮಠಗಳಲ್ಲಿ ಕಾಣಬಹುದು ಅರಮನೆಯಲ್ಲಿ ಸಾಕಷ್ಟು ಚಿತ್ರಗಳು ರಚನೆಗೊಂಡಿದ್ದರು ಇಂದು ಹೊಸ ಅರಮನೆಯ ಪ್ರವೇಶ ದ್ವಾರದ ಎದುರಿಗೆ ಶೇಷಶಯನ ವಿಷ್ಣುವಿನ ವರ್ಣಚಿತ್ರ ಒಂದುಮಾತ್ರ ಉಳಿದಿದ್ದು ಬಹುಪಾಲು ಚಿತ್ರಗಳು ನಶಿಸಿಹೋಗಿವೆ.

   - **ಶೇಷಶಯನ ವಿಷ್ಣು:** ಈ ಚಿತ್ರವನ್ನು 3 ಪಟ್ಟಿಕೆಗಳಲ್ಲಿ ಚಿತ್ರಿಸಲಾಗಿದೆ. ಈ 3 ಪಟ್ಟಿಕೆಗಳಿಗೆ ಕೆಂಪು ನೀಲಿ ಹಾಗೂ ಹಳದಿ ಬಣ್ಣವನ್ನು ಪ್ರಧಾನವಾಗಿ ಬಳಸಲಾಗಿದೆ. ಮೊದಲನೇ ಪಟ್ಟಿಕೆಯಲ್ಲಿ ಅಲಂಕಾರಿಕ ಗೋಪುರ, ಮಧ್ಯದ ಪಟ್ಟಿಕೆಯಲ್ಲಿ ಏಳು ಹೆಡೆಗಳುಳ್ಳ ಆದಿಶೇಷನ ಮೇಲೆ ಮಲಗಿರುವ ವಿಷ್ಣುವಿನ ಪಾದ ಸೇವೆಯಲ್ಲಿ ಶ್ರೀದೇವಿ, ಭೂದೇವಿಯರು ನಿರತರಾಗಿದ್ದಾರೆ. ಬ್ರಹ್ಮನು ಕಮಲದಲ್ಲಿ ಕುಳಿತಿದ್ದಾನೆ, ಕೆಳಭಾಗದ ಪಟ್ಟಿಕೆಯಲ್ಲಿ ಜಯ ವಿಜಯರಿರುವ ಚಿತ್ರ ಸುಂದರವಾಗಿ ಚಿತ್ರಿಸಲಾಗಿದೆ.
   - **ರಂಗಂಪೇಟೆಯ ರುದ್ರ ಸ್ವಾಮಿ ಮಠದಲ್ಲಿರುವ ಚಿತ್ರಗಳು:** ಮಠದಲ್ಲಿ ಕಂಡುಬರುವ ಚಿತ್ರಗಳೆಂದರೆ ಅರಮನೆಯ ದೃಶ್ಯ, ಮನುಷ್ಯಾಕೃತಿಗಳು, ಹೂ ಗಿಡಗಳು ಅಲ್ಲದೆ ಬಂಗಾರ ಮತ್ತು ಬೆಳ್ಳಿ ಲೇಪಿತ ಅಲಂಕಾರಿಕ ಚಿತ್ರಗಳು ಕಂಡುಬರುತ್ತವೆ. ಅದರಲ್ಲೂ ಮುಖ್ಯವಾಗಿ ಮದುವೆ ಸಮಾರಂಭ, ಕೃಷ್ಣ ಯಶೋದೆ, ಸಮುದ್ರ ಮಂಥನ, ಜಯ-ವಿಜಯ ಅತ್ಯಂತ ಸುಂದರವಾದ ವರ್ಣಗಳನ್ನು ಬಳಸುವ ಮೂಲಕ ಚಿತ್ರಗಳ ಸೌಂದರ್ಯವನ್ನು ಹೆಚ್ಚಿಸಲಾಗಿದೆ.
   - **ರಂಗಂಪೇಟೆಯಲ್ಲಿರುವ ಮತ್ತೊಂದು ಮಠ ಅಣ್ಣಯ್ಯನ ಮಠ:** ಇಲ್ಲಿಯೂ ಕೂಡ ಅನೇಕ ಚಿತ್ರಗಳು ಕಂಡು ಬರುತ್ತವೆ ಅವುಗಳಲ್ಲಿ ದತ್ತಾತ್ರೇಯ, ಮಹಿಷಾಸುರಮರ್ದಿನಿ, ಶಿವನ ತಪಸ್ಸನ್ನು ಭಂಗ ಪಡಿಸುತ್ತಿರುವ ಮನ್ಮಥ, ದ್ರೌಪತಿಯ ಸ್ವಯಂವರ ಚಿತ್ರಗಳು ಸೊಗಸಾಗಿವೆ. ಈ ಮೇಲಿನ ಎಲ್ಲಾ ಚಿತ್ರಗಳ ವರ್ಣವಿನ್ಯಾಸ ಮತ್ತು ಆಕೃತಿ ಸಂಯೋಜನೆಯಲ್ಲಿ ಈ

ಚಿತ್ರಗಳು ವಿಶಿಷ್ಠ ರಚನೆಯಿಂದ ಕುಡಿವೇ. ಈ ಚಿತ್ರಗಳಲ್ಲಿನ ರೇಖಾವಿನ್ಯಾಸ, ವರ್ಣಸಂಯೋಜನೆಯಿಂದಾ ಈ ಚಿತ್ರಗಳು ಮುಖ್ಯವೆನಿಸುತ್ತವೆ.ಈ ಎಲ್ಲಾ ಚಿತ್ರಗಳು ಮೊದಲ ಬಾನಯ್ಯನಿಂದ ಚಿತ್ರಿಸಲ್ಪಟ್ಟಿವೆ.

2. **ಹಸ್ತಪ್ರತಿಗಳು:** ಹಸ್ತಪ್ರತಿಗಳುನಮ್ಮ ಹಿರಿಯರ ಅಮೂಲ್ಯ ಆಸ್ತಿಗಳಾಗಿದ್ದು ಇವು ನಮ್ಮ ಸಂಸ್ಕೃತಿಯ ಪ್ರತೀಕದಂತಿವೆ. ಇಂತಹ ಹಸ್ತಪ್ರತಿಗಳಲ್ಲಿ ಚಿತ್ರಗಳು ಕಾಣಿಸುವುದುವುಂಟು. ಹಸ್ತಪ್ರತಿಗಳ ಕಥಾವಸ್ತುವಿನ ಸನ್ನಿವೇಶಕ್ಕನುಗುಣವಾಗಿ ಚಿತ್ರಿಸಲಾದಚಿತ್ರಗಳಿಗೆ ಹಸ್ತಪ್ರತಿ ಚಿತ್ರಗಳೆಂದು ಕರೆಯಬಹುದಾಗಿದೆ. ಗರುಡಾದ್ರಿ ಮನೆತನದವರಿಂದ ಹಸ್ತಪ್ರತಿ ಚಿತ್ರಗಳಲ್ಲಿ ಫಲಕದ ಮೇಲೆ ಚಿತ್ರಗಳು, ಕಾಗದದ ಮೇಲಿನ ಚಿತ್ರಗಳು ಎಂದು ವಿಂಗಡಿಸಲಾಗಿದೆ. ಈ ಹಸ್ತಪ್ರತಿ ಚಿತ್ರಗಳಲ್ಲಿ ರೇಖಾಚಿತ್ರಗಳು, ವರ್ಣಚಿತ್ರಗಳು ಕಂಡುಬರುತ್ತವೆ.
3. **ಸಂಕಿರಣ ಮಾಧ್ಯಮದ ಚಿತ್ರಗಳು**: ಗರುಡಾದ್ರಿ ಮನೆತನದವರಿಂದ ಚಿತ್ರಿಸಲ್ಪಟ್ಟ ಚಿತ್ರಗಳಲ್ಲಿ ಸಂಕಿರಣ ಮಾಧ್ಯಮದ ಚಿತ್ರಗಳು ಪ್ರಮುಖವಾಗಿವೆ. ಇವುಗಳನ್ನು ಭಾವಚಿತ್ರಗಳು, ದೇವಾನುದೇವತೆಗಳ ಸಂಯೋಜನೆ ಚಿತ್ರಗಳು, ಗಾರೆ, ಕಾಷ್ಠ ಹಾಗೂ ಶಿಲಾ ಮಾಧ್ಯಮದ ಶಿಲ್ಪಗಳು ಕಂಡುಬರುತ್ತವೆ. ಗರುಡಾದ್ರಿ ಮನೆತನದವರು ಕಲಾವಿದರಾಗಿದ್ದರಿಂದ ಅರಸರ ಕೋರಿಕೆಯಂತೆ ಚಿತ್ರಗಳನ್ನು ಚಿತ್ರಿಸಿದ್ದಾರೆ. ಹಾಗಾಗಿ ಅವರ ಅರಸರ, ಮಂತ್ರಿ ವರ್ಗದವರ ಮತ್ತು ಆಸ್ಥಾನ ಪ್ರಮುಖರ ಸಾಕಷ್ಟು ಚಿತ್ರಗಳು ರಚನೆಗೊಂಡಿವೆ.

ಅರಸರ ಚಿತ್ರಗಳಲ್ಲಿ ಸುರಪುರ ಸಂಸ್ಥಾನದ ದೊರೆಗಳಾದ ನಾಯಕ ಹಸರಂಗಿ ಪಾಮನಾಯಕ, ಪಿತಾಂಬರಿ ಬಹರಿ ಪಿಡ್ಡನಾಯಕ, ಮಂಡುಗ್ಯೆ ವೆಂಕಟಪ್ಪನಾಯಕ, ನಾಲ್ವಡಿ ವೆಂಕಟಪ್ಪನಾಯಕ ಚಿತ್ರಗಳು ಸೇರಿದಂತೆ ಸುರಪುರ ಸಮಕಾಲೀನ ಸಂಸ್ಥಾನಿಕರಾದ ಗುಂತಗೋಳ ದೊರೆ ವೆಂಕಟಪ್ಪ ನಾಯಕ, ಗುಡಗುಂಟಿ ದೊರೆ ಮಾದಪ್ಪ ನಾಯಕ ಚಿತ್ರಗಳನ್ನು ಪ್ರಮುಖವಾಗಿ ಹೆಸರಿಸಬಹುದು. ಒಂದೊಂದು ಚಿತ್ರದಲ್ಲಿ ಒಂದೊಂದು ಶೈಲಿಯ ಪ್ರಭಾವವನ್ನು ಕಾಣಬಹುದು. ಅವುಗಳೆಂದರೆ ಬಿಜಾಪುರ ಶೈಲಿ, ದಖನಿ ಶೈಲಿ, ಕಂಪನಿ ಶೈಲಿ, ಹೈದರಾಬಾದ್ ಕಲಾ ಶೈಲಿಯನ್ನು ಕಾಣಬಹುದು.

- **ದೇವಾನುದೇವತೆಗಳ ಚಿತ್ರ:** ಗರುಡಾದ್ರಿ ಮನೆತನದವರಿಂದ ಚಿತ್ರಿಸಲ್ಪಟ್ಟ ಸಂಯೋಜನಾ ಚಿತ್ರಗಳಲ್ಲಿ ಪೌರಾಣಿಕ ಮತ್ತು ಧಾರ್ಮಿಕ ಹಿನ್ನೆಲೆಯ ಚಿತ್ರಗಳೆ ಹೆಚ್ಚು. ಸುರಪುರ ಸಂಸ್ಥಾನಿಕರು ಶ್ರೀ ವೆಂಕಟೇಶ್ವರನ ಅನುಯಾಯಿಯಾಗಿದ್ದರಿಂದ ಸಾಕಷ್ಟು ಚಿತ್ರಗಳನ್ನು ಚಿತ್ರಿಸಲ್ಪಟ್ಟಿವೆ.
- **ಪ್ರಭಾವ ಮತ್ತು ಪ್ರೇರಣೆ:** ಆಂಧ್ರಪ್ರದೇಶ ಮೂಲದ ಗರುಡಾದ್ರಿ ಮನೆತನದ ಪೂರ್ವಿಕರು ವಿಜಯನಗರ ಸಂಸ್ಥಾನದ ಆಶ್ರಯ ಪಡೆದಿದ್ದರು. ಆ ಸಾಮ್ರಾಜ್ಯದಲ್ಲಿನ ಕಲೆ ಮತ್ತು ಸಾಂಸ್ಕೃತಿಕ ವಾತಾವರಣವನ್ನು ಚಿತ್ರಕಲೆ ಅಭಿವ್ಯಕ್ತಿಸಿದ್ದಾರೆ. ವಿಜಯನಗರ ಸಾಮ್ರಾಜ್ಯದ ಪತನಾನಂತರ ಈ ಕಲಾವಿದರ ಕುಟುಂಬವನ್ನು ಸುರಪುರ ಸಂಸ್ಥಾನದಲ್ಲಿ ಆಶ್ರಯವನ್ನು ಪಡೆಯಿತು. ಈ ಹಿನ್ನಲೆಯಲ್ಲಿ ಸುರಪುರ ಪ್ರಾರಂಭಿಕ ಹಂತದ ಚಿತ್ರಗಳನ್ನು ವಿಜಯನಗರ ಕಲಾಶೈಲಿಯ ಮುಂದುವರೆದ ರೂಪ ಎನ್ನಬಹುದು. ನಂತರ ಆಯಾ ಕಾಲಘಟ್ಟದಲ್ಲಿ ರಾಜಕೀಯ ಬೆಳವಣಿಗೆಗಳು ಸುರಪುರ ಚಿತ್ರಗಳ ಮೇಲೆ ಅನ್ಯ ಕಲಾಶೈಲಿಗಳ ಪ್ರಭಾವ ಉಂಟಾಯಿತು. ಸುರಪುರ ಅರಸರು ಬಿಜಾಪುರದ ಆದಿಲ್ ಶಾಹಿ ಹೈದ್ರಾಬಾದ್ ನಿಜಾಮರ ಸಹವರ್ತಿಗಳಾಗಿ ಅಧಿಕಾರ ನಡೆಸಿರುವುದರಿಂದ ನಂತರ ಬ್ರಿಟಿಷರ ಅಧಿಪತ್ಯಕ್ಕೆ ಒಳಪಟ್ಟಿರುವುದರಿಂದ ಬಿಜಾಪುರ, ಹೈದ್ರಾಬಾದ್ ಮತ್ತು ಕಂಪನಿ ಸರಕಾರದ ಕಲಾ ಶೈಲಿಗಳ ಪ್ರಭಾವವು ಸುರಪುರ ಚಿತ್ರಕಲೆಯ ಮೇಲೆ ಆಗಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಚಿತ್ರಗಳು ಕೆಂಪು, ಹಳದಿ ವರ್ಣಗಳೊಂದಿಗೆ ಹಸಿರು, ನೀಲಿ ಮತ್ತು ಕಂದು ಕೆಂಪು ವರ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ. ನೈಸರ್ಗಿಕ ವರ್ಣಗಳಾಗಿವೆ ರಾಸಾಯನಿಕ ವರ್ಣಗಳನ್ನು ಚಿತ್ರ ರಚನೆಗಾಗಿ ಬಳಸಿದೆ. ಸುರಪುರದ ಕಿರುರೂಪ ಚಿತ್ರಗಳು ಚಿನ್ನದ ಲೇಪನ ಕ್ಕೆ ಪ್ರಸಿದ್ಧವಾಗಿವೆ. ಸಮಕಾಲೀನ ಮೈಸೂರು ಮತ್ತು ತಂಜಾವೂರು ಚಿತ್ರಕಲೆಯಲ್ಲಿ ಪ್ರಚಲಿತವಿದ್ದ ಚಿನ್ನದ ಲೇಪನತಂತ್ರ ಈ ಕಲೆಯಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಆದರೆ ಇದು ಆಭರಣ ಮುಕುಟ ಇತ್ಯಾದಿಗಳಿಗೆ ಮಾತ್ರ ಸೀಮಿತವಾಗಿದೆ. ಚಿನ್ನದ ಲೇಪನ ಸುರಪುರ ಚಿತ್ರಕಲೆಯಲ್ಲಿ ಮಿತವಾಗಿ ಬಳಸಲಾಗಿರುವದರಿಂದ ನೋಡಲು ಸುಂದರವಾಗಿ ಕಾಣಿಸುತ್ತವೆ. ಒಟ್ಟಿನಲ್ಲಿ ಸುರಪುರ ಚಿತ್ರಗಳು ವಿಶಿಷ್ಟ ರಚನೆ ಹಾಗೂ ತಂತ್ರಗಾರಿಕೆಯಿಂದ ಭಾರತೀಯ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ 'ಸ್ವತಂತ್ರ ಶೈಲಿ' ಎನಿಸಿಕೊಂಡಿದೆ. ಸುರಪುರ ಸಂಸ್ಥಾನದ ಅರಸರ ಕಾಲದಲ್ಲಿ ರಾಜಾಶ್ರಯ ಪಡೆದು ಉನ್ನತ ಸ್ಥಾನ ಪಡೆದಿದ್ದ ಗರುಡಾದ್ರಿ ವಂಶಸ್ಥರ ಈಗಿನ ಸ್ಥಿತಿ ಉತ್ತಮವಾಗಿಲ್ಲ. ಸುರಪುರದ ಚಿತ್ರಕಲೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಿದ್ದ ಈ ಕಲೆಯ ಕಲಾವಿದರಿಗೆ ಸರಕಾರ ಸಂಸ್ಥೆಗಳು ಸಹಾಯ ಸಹಕಾರವನ್ನು ನೀಡಿದರೆ ಅವರ ಆರ್ಥಿಕ ಸ್ಥಿತಿ ಸುಧಾರಿಸುವಂತೆ ಆಗುತ್ತದೆ. ಈ ಚಿತ್ರಕಲೆಯನ್ನು ಉಳಿಸಿ ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಕೊಂಡೊಯ್ಯುವದು ನಮ್ಮ–ನಿಮ್ಮೆಲ್ಲರ ಕರ್ತವ್ಯವಾಗಿದೆ.

## ಆಕರ ಗ್ರಂಥಗಳು


1. ಕಪಟರಾಳ ಕೃಷ್ಣರಾವ್,'ಸುರಪುರ ಸಂಸ್ಥಾನ ಇತಿಹಾಸ', ಮಂಜುನಾಥ ಪ್ರಕಾಶನ,ಬೆಂಗಳೂರು.
2. ಕೃಷ್ಣಮಾಚಾರ್.ಬಿ, 'ಮರೆಯಲಾಗದ ರಾಜರ ಚರಿತ್ರೆ', ಶ್ರೀಮತಿ ರಂಜನಾ ಪ್ರಕಾಶ್ ಪ್ರಕಾಶನ, ಸುರಪುರ.
3. ಕೃಷ್ಣ ಎ,'ಸಗರನಾಡು ದರ್ಶನ', ಮಹಾಕವಿ ಲಕ್ಷ್ಮೀಶ ವಾಚನ ಸಂಘ, ಸುರಪುರ.
4. ಮಲ್ಲಿಕಾರ್ಜುನ ಬಾಗೋಡಿ,'ಸುರಪುರ ಚಿತ್ರಕಲೆ, ಸರ ಚಂದ್ರ ಪ್ರಕಾಶನ, ಚಿತಾಪುರ್.

5. ಬಸವರಾಜ್ ಉಪ್ಪಿನ,'ಬಾನಯ್ಯ ಗರುಡಾದ್ರಿ', ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
6. ಅರುಣಿ ಎಸ್.ಕೆ,'ಸುರಪುರ ಸಂಸ್ಥಾನ', ಭಾರತೀಯ ಕಲಾ ಪ್ರಕಾಶನ, ದೆಹಲಿ.